ಮೈಸೂರ ಗೆಜಿಟ್.

ಸಂ. 44.] ಸರ್ಕಾರದಿಂದ ಪಾಯಿಷ್ ಆದ್ದು. [ನಂ. 40

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ॥ 7, ಸ್ 1909.

III ನೆ ಭಾಗ.

ಲೆಜಿಸ್ಲೇಟಿವ್ ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ಮೆಂಟು

ಲೆಜಿಸ್ಲೇಟಿವ್ ಇಲಾಖೆ.

ಇಸ್ತಿಹಾರ್ನಾಮೆ.

ನಂಬರ್ ಜಿ. 794—ಲೆಜಿಸ್ಲೇಪರ್, ತಾರೀಖು 15ನೆ ಸೆಪ್ಟಂಬರ್ 1909.

ಮೈಸೂರು ನ್ಯಾಯವಿಧಾಯಕ ಸಭೆಗೆ ಸರ್ಕಾರಿ ಉದ್ಯೋಗಸ್ಥರಲ್ಲದ ಇಬ್ಬರು ಮೆಂಬರುಗಳನ್ನು ಚುನಾಯಿಸುವ ವಿಷಯದಲ್ಲಿ 1903ನೆ ಇಸವಿ ಜೂ 10ನೆ ಮಕ್ರಂ 102ನೆ ನಂಬರ ಇಸ್ತಿಹಾರ್ನಾಮೆಯಲ್ಲಿ ಸಾದರಾದ ನಿಬಂಧನೆಗಳನ್ನು ಈ ಮೂಲಕ ರದ್ದುಮಾಡಿ ಶ್ರೀಮರ್ ಮಹಾರಾಜ ರಾಜಾಸಾಹೇಬ್ಬಹದುರವರು 1907ನೆ ಇಸವಿಯ 1ನೆ ನಂಬರ ಮೈಸೂರು ನ್ಯಾಯವಿಧಾಯಕ ಸಭೆಯ ರೆಗ್ಯುಲೇಷನಿನ 5ನೆ ಪ್ರಕರಣದಲ್ಲಿ ತಮ್ಮಗೆ ಕೊಡಲ್ಪಟ್ಟಿರುವ ಅಧಿಕಾರಾನುಗುಣವಾಗಿ ಇದರಡಿ ಕಂಡ ನಿಬಂಧನೆಗಳನ್ನು ಏರ್ಪಡಿಸಲು ಅಪ್ಪಣೆ ದಯಪಾಲಿಸಿರುತ್ತಾರೆ:—

I. ಸರ್ಕಾರದವರು ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳ ಪೈಕಿ ಇಬ್ಬರನ್ನು ನ್ಯಾಯವಿಧಾಯಕ ಸಭಾ ಮೆಂಬರುಗಳಾಗಿ ನೇಮಿಸಬಹುದು. ಹಾಗೆ ನೇಮಿಸಲ್ಪಡತಕ್ಕವರು ಮುಂದಿನ ನಿಬಂಧನೆಗಳಲ್ಲಿ ವಿಧಿಸಿರುವ ರೀತ್ಯಾ ಚುನಾಯಿಸಲ್ಪಟ್ಟಿರಬೇಕು.

II. ಈ ಚುನಾವಣೆಯ ಬಗ್ಗೆ ಪ್ರತಿನಿಧಿ ಸಭೆಯ ಮೆಂಬರುಗಳ ಪೈಕಿ ಸಂಸ್ಥಾನದ ಪಶ್ಚಿಮ ಡಿವಿಜನ್ನಿನಿಂದ ಎಂದರೆ ಮೈಸೂರು ಹಾಸನ, ಕಡೂರು, ಶಿವಮೊಗ್ಗ ಡಿಸ್ಟ್ರಿಕ್ಟ್ಗಳಿಂದ ಚುನಾಯಿಸಲ್ಪಟ್ಟಿರುವ ಮೆಂಬರುಗಳನ್ನು ಬಂದು ಗುಂಪಾಗಿಯೂ, ಪೂರ್ವ ಡಿವಿಜನ್ನಿನಿಂದ ಎಂದರೆ ಬೆಂಗಳೂರು, ಕೋಲಾರ, ತುಮಕೂರು, ಚಿತ್ರದುರ್ಗ ಡಿಸ್ಟ್ರಿಕ್ಟ್ಗಳಿಂದ ಚುನಾಯಿಸಲ್ಪಟ್ಟಿರುವ ಮೆಂಬರುಗಳನ್ನು ಎರಡನೆ ಗುಂಪಾಗಿಯೂ ಏರ್ಪಡಿಸಲಾಗುವುದು.

III. (1) ವರ್ಷೇವರ್ಷೇ ಪ್ರಜಾಪ್ರತಿನಿಧಿ ಸಭೆಯು ನಡೆಯುತ್ತಿರುವಾಗ ಸರ್ಕಾರದವರು ಗೊತ್ತುಮಾಡುವ ಕಾಲ ಮತ್ತು ಸ್ಥಳಗಳಲ್ಲಿ ಪ್ರತಿನಿಧಿಗಳ ಮೀಟಿಂಗ್ ಸೇರಿಸಿ ಮೇಲ್ಕಂಡ 11ನೆ ನಿಬಂಧನೆಯಲ್ಲಿ ನಮೂದಿಸಲ್ಪಟ್ಟ ಎರಡು ಗುಂಪುಗಳ ಪೈಕಿ ಪ್ರತಿಯೊಂದು ಗುಂಪಿನವರೂ ನ್ಯಾಯವಿಧಾಯಕ ಸಭೆಗೆ ಮೆಂಬರಾಗಿ ನೇಮಿಸಲ್ಪಡುವ ಬಗ್ಗೆ ತಮ್ಮ ತಮ್ಮ ಗುಂಪಿನ ಪೈಕಿ ಒಬ್ಬ ಮೆಂಬರನ್ನು ಚುನಾಯಿಸಬೇಕೆಂದು ಕೇಳಲಾಗುವುದು.

(2) ಬಂದು ಡಿವಿಜನ್ನಿನಿಂದ ಚುನಾಯಿಸಲ್ಪಡಲು ಇಷ್ಟಪಡುವ ಪ್ರತಿನಿಧಿಗಳು ತಮ್ಮ ಇಷ್ಟವನ್ನು ಮೈಸೂರು ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖಾ ಸೆಕ್ರಿಟೆರಿಯವರಿಗೆ ವಿಜಯದಶಮಿಯೊಳಗಾಗಿ ಬರಹಮೂಲಕವಾಗಿ ತಿಳಿಯಪಡಿಸಬೇಕು.

(3) ಉಮೇದುವಾರರಾಗಲು ಇಷ್ಟವಿರುವುದೆಂದು ತಿಳಿಯಪಡಿಸಿರುವವರ ಪೈಕಿ ಆಯಾ ಡಿವಿಜನ್ನಿಗೆ ಸರ್ಕಾರದವರು ಯಾರ್ಯಾರನ್ನು ಅನುಮೋದಿಸಬಹುದೋ ಅಂಥಾವರ ಹೆಸರುಗಳ ಪಟ್ಟಿಯನ್ನು ಚುನಾವಣೆ ಬಗ್ಗೆ ನಿಷ್ಕರ್ಷೆಯಾದ ದಿನಕ್ಕೆ ಕಡೇ ಪಕ್ಷ ಎರಡುದಿವಸ ಮುಂಚಿತವಾಗಿ ಪ್ರತಿನಿಧಿ ಸಭಾ ಮಂದಿರದಲ್ಲಿ ಬಹಿರಂಗವಾದ ಕಡೆ ಚಿಕಟ್ಟಾಯಿಸಲಾಗುವುದು. ಪ್ರತಿನಿಧಿಗಳು ಆ ಪೈಕಿ ತಮ್ಮ ತಮ್ಮ ಡಿವಿಜನ್ನಿಗೆ ಸೇರಿದ ಬಬ್ಬರಿಗೆ ಮಾತ್ರವೇ ವೋಟ್ ಮಾಡಬೇಕು

(4) ವೋಟುಗಳನ್ನು ಬ್ಯಾಲಟ್ ಮೂಲಕ ಕೊಡತಕ್ಕದ್ದು.

(5) ಸರ್ಕಾರದವರಿಂದ ನೇಮಿಸಲ್ಪಟ್ಟ ಒಬ್ಬ ಆಫೀಸರು ಸದರೀ ವಿಾಟಂಗಿನಲ್ಲಿ ಹಾಜರಿದ್ದು ಪ್ರತಿನಿಧಿಗಳು ಕೊಟ್ಟಿರುವ ವೋಟುಗಳನ್ನು ಲೆಕ್ಕ ಮಾಡುವರು.

(6) ವಿಾಟಿಂಗ್ ಪ್ರೂಫೈಸಿದ ತರುವಾಯ ಪ್ರತಿ ಗುಂಪಿನವರಿಂದಲೂ ವೋಟುಗಳನ್ನು ಪಡೆದ ಉಮೇದುವಾರರುಗಳ ಹೆಸರುಗಳನ್ನೂ ಮತ್ತು ಪ್ರತಿ ಉಮೇದುವಾರರಿಗೂ ಎಷ್ಟೆಷ್ಟು ವೋಟುಗಳು ಬಂದುವು ಎಂಬ ವಿವರಗಳನ್ನೂ ತೋರಿಸುವ ರಿಪೋರ್ಟುನಿಶೀ ಸದರೀ ಆಫೀಸರು ವೋಟಿನ ಚೀಟುಗಳನ್ನು ಸರ್ಕಾರದವರಿಗೆ ಕಳುಹಿಸಿಕೊಡಬೇಕು.

(7) ಅಂಥಾ ವಿಾಟಿಂಗಿನ ಕಾರ್ಯ ನಿರ್ವಾಹದ ಬಗ್ಗೆ ಅವಶ್ಯಕವಾದ ಹೆಚ್ಚು ನಿಬಂಧನೆಗಳನ್ನು ಸರ್ಕಾರದವರು ಏರ್ಪಡಿಸಬಹುದು.

IV. ಆಯಾ ಗುಂಪಿಗೆ ಸೇರಿದ ಮೆಂಬರುಗಳಿಂದ ಅತ್ಯಂತ ಹೆಚ್ಚು ಸಂಖ್ಯೆಯ ವೋಟುಗಳನ್ನು ಪಡೆದಿರುವ ಇಬ್ಬರು ಉಮೇದುವಾರರುಗಳನ್ನು ಸರ್ಕಾರದವರು ನ್ಯಾಯವಿಧಾಯಕ ಸಭೆಯ ಮೆಂಬರುಗಳಾಗಿ ನೇಮಿಸಿಕೊಳ್ಳಬಹುದು.

V. ಮೇಲ್ಕಂಡ IIನೆ ನಿಬಂಧನೆಯಲ್ಲಿ ಸೂಚಿಸಿರುವ ಎರಡು ಗುಂಪುಗಳ ಪೈಕಿ ಯಾವುದಾದರೊಂದು ಗುಂಪಿನಿಂದ ಈ ನಿಬಂಧನೆಗಳ ಮೇರೆಗೆ ನ್ಯಾಯವಿಧಾಯಕ ಸಭೆಗೆ ನೇಮಿಸಲ್ಪಟ್ಟ ಮೆಂಬರಿನ ಸ್ಥಾನವು ಖಾಲಿ ಬಿದ್ದಲ್ಲಿ ಮೂರನೆ ವರ್ಷದ ಪ್ರತಿನಿಧಿ ಸಭೆಯಲ್ಲಿ ಸದರೀ ಗುಂಪಿಗೆ ಸೇರಿದ ಪ್ರತಿನಿಧಿಗಳ ವೋಟುಗಳನ್ನು ತೆಗೆದುಕೊಂಡನಂತರವೇ ಸದರೀ ಸ್ಥಾನಕ್ಕೆ ಇನ್ನೊಬ್ಬ ಮೆಂಬರು ನೇಮಿಸಲ್ಪಡತಕ್ಕದ್ದು.

ಹುಕುಂ ಬಮೋಜೇಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಸೆಕ್ರಟೆರಿ.